# ಬೃಹತ್ ಬೆಂಗಳೂರು ಮಹಾನಗರ ಪಾಲಿಕೆ

ಸಂಖ್ಯೆ: ವಾರ್ಡ್ ಸಂಖ್ಯೆ 11/ಸಭೆ/ಪಿಆರ್/04/2020-21 ದಿನಾಂಕ : 21/11/2020

**ಮಾನ್ಯ ಆಯುಕ್ತರು ರವರ ಸುತ್ತೋಲೆ ಸಂಖ್ಯೆ ಬಿ12(5)/ಪಿ.ಆರ್/35/2020-21 ದಿನಾಂಕ 21/09/2020ರ ಆದೇಶದ ಅನ್ವಯ ಕುವೆಂಪುನಗರಕ್ಕೆ ಸಂಬಂಧಿಸಿದಂತೆ ವಾರ್ಡ್ ನಂ 11 ಕುವೆಂಪುನಗರ ವಾರ್ಡ್ ಕಛೇರಿಯಲ್ಲಿ ದಿನಾಂಕ 21/11/2020 ರಂದು ನೋಡೆಲ್ ಅಧಿಕಾರಿ ರವರ ಅಧ್ಯಕ್ಷತೆಯಲ್ಲಿ ಕೈಗೊಂಡ ವಾರ್ಡ್ ಸಮಿತಿ ಸಭೆಯ ನಡವಳಿಗಳು**

**ಹಾಜರಿದ್ದ ಅಧಿಕಾರಿ /ನೌಕರರು**

1. ಶ್ರೀ ಪ್ರಸನ್ನ ವೆಂಕಟೇಶ್, ನೋಡಲ್ ಅಧಿಕಾರಿ
2. ಶ್ರೀ ಸೋಮನಾಥ್ ಎಸ್ ಜಾಧವ್, ಸಹಾಯಕ ಅಭಿಯಂತರರು & ಕಾರ್ಯದರ್ಶಿ ಹಾಗೂ ಸಂಚಾಲಕರು
3. ಶ್ರೀಮತಿ ಸುಮನ, ಸಹಾಯಕ ಅಭಿಯಂತರರು, ಬೃಹತ್ ರಸ್ತೆಗಳು
4. ಶ್ರೀಮತಿ ಅರುಣ, ಸಹಾಯಕ ಅಭಿಯಂತರರು, ವಿದ್ಯುತ್
5. ಶ್ರೀ ನಾರಾಯಣ ಸ್ವಾಮಿ, ಲೈವ್ ಸ್ಟಾಕ್ ಆಫೀಸರ್
6. ಶ್ರೀಮತಿ ರಮ್ಯ, ಕಂದಾಯ ಪರಿವೀಕ್ಷಕರು
7. ಶ್ರೀಮತಿ ಕಾಂತಮಣಿ, ಕಿರಿಯ ಆರೋಗ್ಯ ಪರಿವೀಕ್ಷಕರು

**ಹಾಜರಿದ್ದ ಸದಸ್ಯರು**

1. ಶ್ರೀ ರಾಜೇಶ್, ಶ್ರೀನಿದಿ ಲೇಔಟ್
2. ಶ್ರೀ ಗುರುಪ್ರಸಾದ್, ಸಿಂಗಾಪುರ ಪ್ಯಾರಡೈಸ್
3. ಶ್ರೀ ನಾಗರಾಜು ಎಸ್.ಎಂ, ಸಿಂಗಾಪುರ
4. ಶ್ರೀ ಮೋಹನ್, ಸಿಂಗಾಪುರ
5. ಶ್ರೀ ವೆಂಕಟೇಶ್, ಶ್ರೀನಿಧಿ ಲೇಔಟ್
6. ಶ್ರೀ ನವಾಜ್, ಎಂ.ಎಸ್ ಪಾಳ್ಯ

**ಶ್ರೀ ಸೋಮನಾಥ್ ಎಸ್ ಜಾಧವ್, ಕಾರ್ಯದರ್ಶಿ ಹಾಗೂ ಸಂಚಾಲಕರು:-** ಸಭೆಗೆ ಹಾಜರಿದ್ದ ಅಧಿಕಾರಿಗಳನ್ನು ಪರಿಚಯ ಮಾಡಿಕೊಳ್ಳುವುದರ ಮುಖಾಂತರ ಸ್ವಾಗತವನ್ನು ಕೋರಿದರು. ಹಾಗೂ ವಾರ್ಡಿಗೆ ಸಂಬಂಧಿಸಿದ ವಿಷಯಗಳ ಬಗ್ಗೆ ಚರ್ಚಿಸಲು ಎಲ್ಲರನ್ನು ಕೋರಿ ಸಭೆಯಲ್ಲಿ ನಡೆಯುವ ನಡವಳಿಗಳನ್ನು ನಮೂದಿಸಲು ತಿಳಿಸಿದರು.

**ಶ್ರೀ ರಾಜೇಶ್ :-** ಶ್ರೀನಿಧಿ ಬಡಾವಣೆಯ 8ನೇ ಡಿ ಮುಖ್ಯ ರಸ್ತೆ, 4ನೇ ಅಡ್ಡರಸ್ತೆಯಲ್ಲಿ ತ್ಯಾಜ್ಯವನ್ನು ಹಾಕುತ್ತಿರುವುದಾಗಿ ಹಾಗೂ ಕೊಳವೆ ಬಾವಿಯಲ್ಲಿ ಸಮರ್ಪಕವಾಗಿ ನೀರು ಪೂರೈಕೆಯಾಗುತ್ತಿರುವುದಿಲ್ಲವೆಂದು ದೂರು ನೀಡಿರುತ್ತಾರೆ.

**ಶ್ರೀ ಗುರುಪ್ರಸಾದ್ :-** ಸಿಂಗಾಪುರ ಪ್ಯಾರಡೈಸ್ ವ್ಯಾಪ್ತಿಯಲ್ಲಿ ಬಿಡಬ್ಲ್ಯೂಎಸ್ಎಸ್‌ಬಿ ವತಿಯಿಂದ ಅಗೆದಿರುವ ರಸ್ತೆಯನ್ನು ದುರಸ್ಥಿಪಡಿಸಲು ಹಾಗೂ ಈಗಾಗಲೇ ಅಳವಡಿಸಿರುವ ಚರಂಡಿಯ ಹರಿಯುವಿಕೆಯ ಕೊನೆಯನ್ನು ನಿರ್ಮಿಸಲು ಕೋರಿದರು.

Scanned by CamScanner

**ಶ್ರೀ ವೆಂಕಟೇಶ್:** ಶ್ರೀನಿಧಿ ಲೇಔಟ್ 3ನೇ ಅಡ್ಡರಸ್ತೆ, 4ನೇ ಅಡ್ಡರಸ್ತೆ & 8ನೇ ಎಫ್ ಅಡ್ಡರಸ್ತೆಗಳಲ್ಲಿ ಇರುವ ಬ್ಲಾಕ್‌ಸ್ಪಾಟ್‌ಗಳನ್ನು ತೆರವುಗೊಳಿಸಲು ಕೋರಿದರು.

**ಶ್ರೀ ನವಾಜ್, ಎಂ.ಎಸ್ ಪಾಳ್ಯ** :- ಎಂ.ಎಸ್ ಪಾಳ್ಯದಿಂದ ಶ್ರೀನಿಧಿ ಲೇಔಟ್ ಮುಖ್ಯ ರಸ್ತೆಯಲ್ಲಿ ಕಸ ಗುಡಿಸುವಿಕೆ ಕಾರ್ಯ ಸಮರ್ಪಕವಾಗಿರುವುದಿಲ್ಲ, ಗಣೇಶ ಲೇಔಟ್‌ನಲ್ಲಿ ಕೊಳವೆ ಬಾವಿ ಕಾರ್ಯ ಸಮರ್ಪಕವಾಗಿ ನಿರ್ವಹಿಸುತ್ತಿರುವುದಿಲ್ಲವೆಂದು ದೂರಿರುತ್ತಾರೆ.

**ಶ್ರೀ ಮೋಹನ್, ಸಿಂಗಾಪುರ** :- ವರದರಾಜ ಸ್ವಾಮಿ ದೇವಸ್ಥಾನದಲ್ಲಿರುವ ಸಮುಧಾಯ ಭವನದ ನಿರ್ವಹಣೆ ಮಾಡಲು ಕೋರಿರುತ್ತಾರೆ.

**ಶ್ರೀ ನಾಗರಾಜು ಎಸ್.ಎಂ, ಸಿಂಗಾಪುರ** :- ಕುವೆಂಪುನಗರದಿಂದ ಗಂಗಮ್ಮ ಗುಡಿ ಸರ್ಕಲ್ ರಸ್ತೆ ಹಾಗೂ ಸಿಂಗಾಪುರದಿಂದ ಅಬ್ಬಿಗೆರೆ ಮುಖ್ಯ ರಸ್ತೆಯವರೆಗೆ, ವರದರಾಜಸ್ವಾಮಿ ಬಡಾವಣೆಯ ಚರಂಡಿಯಲ್ಲಿ ತುಂಬಿರುವ ಹೂಳು ಮತ್ತು ಮಣ್ಣನ್ನು ತೆರವುಗೊಳಿಸಲು, ಅನಧಿಕೃತವಾಗಿ ಕೊರೆಯುತ್ತಿರುವ ಕೊಳವೆ ಬಾವಿಗಳನ್ನು ಕೊರೆಸದಂತೆ ತಡೆಯಲು ಮತ್ತು ವರದರಾಜಸ್ವಾಮಿ ಲೇಔಟ್‌ನಲ್ಲಿ ಹೊಸದಾಗಿ ಕೊಳವೆ ಬಾವಿ ಕೊರೆಯಲು, ಎಂ.ಎಸ್ ಪಾಳ್ಯ ಮುಖ್ಯ ರಸ್ತೆಯಲ್ಲಿ ಒತ್ತುವರಿ ಪಾದಚಾರಿ ಮಾರ್ಗವನ್ನು ತೆರವುಗೊಳಿಸಲು, ಎಂ.ಎಸ್ ಪಾಳ್ಯದಿಂದ ಸಿಂಗಾಪುರಕ್ಕೆ ಹೋಗುವ ರಸ್ತೆಯಲ್ಲಿ ವಿದ್ಯುತ್ ದೀಪ ದುರಸ್ಥಿಪಡಿಸಲು ಹಾಗೂ ಸಿಂಗಾಪುರ ಬಸ್ ಸ್ಟಾಂಡ್ ಮುಂಭಾಗದ ರಾಜಕಾಲುವೆಯಲ್ಲಿ ಛೇಂಬರ್ ಒಡೆದು ಕೊಳಚೆ ನೀರು ಸಿಂಗಾಪುರ ಕೆರೆಗೆ ಹೋಗುತ್ತಿರುವುದನ್ನು ಸರಿಪಡಿಸಲು ಹಾಗೂ ಮಾರಮ್ಮ ದೇವಸ್ಥಾನದ ಹತ್ತಿರ ಹೊಸದಾಗಿ ಚರಂಡಿ ನಿರ್ಮಿಸಲು ಕೋರಿದರು.

**ಶ್ರೀ ಪ್ರಸನ್ನವೆಂಕಟೇಶ್**:- ವೈಷ್ಣವಿ ಬಡಾವಣೆ, ವೈಷ್ಣವಿ ಬಡಾವಣೆ ಮುಖ್ಯರಸ್ತೆ ಮತ್ತು ಅಡ್ಡರಸ್ತೆ ಮತ್ತು ಅಡ್ಡರಸ್ತೆಗಳಲ್ಲಿರುವ ರಸ್ತೆ ಗುಂಡಿಗಳನ್ನು ತ್ವರಿತವಾಗಿ ಮುಚ್ಚುವಂತೆ ಹಾಗೂ ರಸ್ತೆ ಡಾಂಬರೀಕರಣ ಮಾಡುವಂತೆ ಕೋರಿರುತ್ತಾರೆ. ಮತ್ತು BEML ರಸ್ತೆಯಲ್ಲಿನ ಚರಂಡಿಗಳ ಮೇಲೆ ಒಡೆದಿರುವ ಕವರ್‌ಸ್ಲಾಬ್‌ಗಳನ್ನು ಹೊಸದಾಗಿ ಅಳವಡಿಸುವಂತೆ ಕೋರುತ್ತಾ, ಎಂ.ಎಸ್.ಪಾಳ್ಯ ಸರ್ಕಲ್‌ನಿಂದ ಶ್ರೀನಿಧಿ ಲೇಔಟ್‌ಗೆ ಹೋಗುವ BEML ರಸ್ತೆಯಲ್ಲಿ ಎರಡೂ ಬದಿಗಳಲ್ಲಿ ತಟಸ್ಥವಾಗಿ ನಿಂತುಕೊಂಡಿರುವ ವಾಹನಗಳನ್ನು ತೆರವುಗೊಳಿಸಿ ರಸ್ತೆ ಬಳಸುವವರೆಗೆ ಅನುಕೂಲವಾಗುವ ಪರಿಸ್ಥಿತಿ ನಿರ್ಮಿಸಲು ಕೋರಿರುತ್ತಾರೆ.

ವೈಷ್ಣವಿ ಬಡಾವಣೆ ಮುಖ್ಯರಸ್ತೆಯಲ್ಲಿನ ಬರ್ನ್ ಆಗಿರುವ ಹ್ಯಾಲೋಜನ್ ಬಲ್ಪ್‌ಗಳನ್ನು LED ಬಲ್ಪ್‌ಗಳಿಗೆ ಬದಾಲಾಯಿಸುವಂತೆ ಕೋರಿರುತ್ತಾರೆ.

ಶ್ರೀ ಪ್ರಸನ್ನವೆಂಕಟೇಶ್, ಸ.ಕಾ.ಅ ರವರು ಈ ಮೇಲ್ಕಂಡ ಅಂಶಗಳ ಬಗ್ಗೆ ವಿವರವಾಗಿ ಅಧಿಕಾರಿಗಳಿಗೆ ನಿರ್ದೇಶನ ನೀಡಿ ಸಭೆಯಲ್ಲಿ ಉಪಸ್ಥಿತರಿದ್ದ ಅಧಿಕಾರಿಗಳೊಂದಿಗೆ ಕೂಲಂಕುಶವಾಗಿ ಚರ್ಚಿಸಿದ್ದು, ಸದರಿ ವಿಷಯಗಳ ಬಗ್ಗೆ ಕ್ರಮ ಕೈಗೊಳ್ಳಲು ಸರ್ವಾನುಮತದಿಂದ ತೀರ್ಮಾನಿಸಿ ಗೈರು ಹಾಜರಾಗಿದ್ದ ಅಧಿಕಾರಿ ನೌಕರರಿಗೆ ಕಾರಣಕೇಳಿ ಪತ್ರ ಬರೆಯುವಂತೆ ತಿಳಿಸಿ, ವಂದನಾರ್ಪಣೆಯೊಂದಿಗೆ ಸಭೆಯನ್ನು ಮುಕ್ತಾಯಗೊಳಿಸಲಾಯಿತು.

ಕಾರ್ಯದರ್ಶಿಗಳು
ಹಾಗೂ ಸಹಾಯಕ ಅಭಿಯಂತರರು
ವಾರ್ಡ್ ನಂ 11, ಕುವೆಂಪುನಗರ

21/11/2020
ನೋಡೆಲ್ ಅಧಿಕಾರಿ ಹಾಗೂ
ಸಹಾಯಕ ಕಾರ್ಯಪಾಲಕ ಅಭಿಯಂತರರು

Scanned by CamScanner